

ಅರೆಸ್ಟ್ ಆಗಿ ಜೈಲಿಗೆ ಹೋದ ಗ್ರಾಹಕರ ಬಗ್ಗೆ ವರದಿಗಳನ್ನು ಪ್ರಕಟಿಸುತ್ತದೆ.

## ಬರೀ ಅನೈತಿಕವೇ?

ಕರಾಳ ಜಾಲದಲ್ಲಿ ಇರುವುದು ಎಲ್ಲ ಅನೈತಿಕ ಎಂದು ಭಾವಿಸಿದರೆ ತಪ್ಪಾದೀತು. 1970ರ ದಶಕದಲ್ಲಿ ಡಾರ್ಕ್ ನೆಟ್ ಎಂಬುದಕ್ಕೆ ಕೆಟ್ಟ ಅರ್ಥ ಇರಲೇ ಇಲ್ಲ. 1960ರಲ್ಲಿ ಅರ್ಪಾನೆಟ್ (ಅಡ್ವಾನ್ಸ್ಡ್ ರಿಸರ್ಚ್ ಪ್ರಾಜೆಕ್ಟ್ ಏಜೆನ್ಸಿ ನೆಟ್ ವರ್ಕ್) ಎಂದು ಅಮೆರಿಕದ ರಕ್ಷಣಾ ವಿಭಾಗ ತಮ್ಮ ಕಂಪ್ಯೂಟರ್‌ಗಳ ಪರಸ್ಪರ ಸಂಪರ್ಕಕ್ಕಾಗಿ ಪ್ರಾರಂಭ ಮಾಡಿಕೊಂಡ ವ್ಯವಸ್ಥೆ ಇಂಟರ್ನೆಟ್ ಆಗಿ ಸಾರ್ವಜನಿಕರ ಕೈ ಸೇರಿತು. 1970ರ ವೇಳೆಯಲ್ಲಿ ಅಮೆರಿಕದ ರಕ್ಷಣೆಗೆ ಸಂಬಂಧಿಸದ ಇತರ ಇಂಟರ್ ನೆಟ್ ಅನ್ನು 'ಡಾರ್ಕ್ ನೆಟ್' ಎನ್ನುತ್ತಿದ್ದರು.

ಕೆಲವು ಸರ್ಕಾರಗಳು ತಮ್ಮ ಭದ್ರತೆಗಾಗಿ ವಿ.ಪಿ. ಎನ್. ಸಂಪರ್ಕಗಳನ್ನು ಕಡಿತಗೊಳಿಸಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ತಮ್ಮ ವಾಕ್ ಸ್ವಾತಂತ್ರ್ಯ ಕಳೆದುಕೊಂಡು ಶೋಷಣೆಗೆ ಗುರಿಯಾದ ಮುಗ್ಧ ನಾಗರಿಕರು ತಮ್ಮ ಅಳಲನ್ನು ಪ್ರಪಂಚದ ಇತರರೊಂದಿಗೆ ಹಂಚಿಕೊಂಡು ನೆರವನ್ನು ಪಡೆಯಲು ಕರಾಳ ಜಾಲವನ್ನು ಆಶ್ರಯಿಸುತ್ತಾರೆ. ಅಂತರ್ಜಾಲದ ಸಂವಹನದ ಮೇಲೆ ತಮ್ಮ ಕಣ್ಣು ಕಿವಿಯನ್ನು ಇರಿಸಿದ ಸರ್ಕಾರದಿಂದ ತಪ್ಪಿಸಿಕೊಳ್ಳಲು ಈ ಮಾರ್ಗವನ್ನು ಬಳಸುತ್ತಾರೆ. ಈ ಜಾಲತಾಣಗಳಲ್ಲಿ ರಾಜಕೀಯ ಹಾಗೂ ಧಾರ್ಮಿಕ ಕಾರಣಗಳಿಂದ ನಿಷೇಧಿತವಾದ ಪುಸ್ತಕಗಳು ಲಭ್ಯವಾಗುತ್ತವೆ.

ಕರಾಳ ಜಾಲದ **intel exchange** ಎಂಬ ಮಾಧ್ಯಮದಲ್ಲಿ ಪ್ರಸಕ್ತ ವಿದ್ಯಮಾನಗಳ ಚರ್ಚೆಯನ್ನೂ ನಡೆಸಬಹುದು. ಅನೇಕ **whistle blowers** ಸೈಟುಗಳು ಜನ ಜಾಗೃತಿಯನ್ನು ಮೂಡಿಸಲು, ಮುಂದೆ ಒದಗಬಹುದಾದ ವಿಪತ್ತುಗಳ ಬಗ್ಗೆ ಎಚ್ಚರಿಕೆ ನೀಡಲು 'ಡಿಂಡಿಮ' ತಾಣಗಳಾಗಿ ಇದನ್ನು ಬಳಸಬಹುದು.

ಇತ್ತೀಚೆಗೆ ಕಳುವಾದ ಗುಪ್ತ ಸರ್ಕಾರಿ ಮಾಹಿತಿಗಳು ಇಲ್ಲಿ ಕಾಣಿಸಿಕೊಳ್ಳಬಹುದೇನೋ? ಅದರ ಮೂಲಕ ಕಳ್ಳರ ಜಾಡು ಹಿಡಿಯಬಹುದೇನೋ? ಎಂದು ಕಾನೂನು ಪಾಲಕರೂ ಸಹ ಡಾರ್ಕ್ ವೆಬ್ ಮೊರೆ ಹೋಗುತ್ತಿರುತ್ತಾರೆ. ಪತ್ರಿಕೋದ್ಯಮಿಗಳು ಹಾಗೂ ವಾರ್ತಾ ಮಾಧ್ಯಮಗಳು ಇಲ್ಲಿ ತಾಜಾ ಸುದ್ದಿಗಳು ಏನಾದರೂ ಸಿಗಬಹುದೇನೋ ಎಂದು ಠಳಾಯಿಸುತ್ತಾರೆ.

ಅಂತರರಾಷ್ಟ್ರೀಯ ಅಪರಾಧ ತಡೆ ಸಂಸ್ಥೆಗಳು ಪದೇ ಪದೇ ನಿರ್ಮೂಲನ ಮಾಡಿರುವ **bit torrent, pirate bay** ರೀತಿಯ ಜಾಲತಾಣಗಳು ಮತ್ತೆ ಮತ್ತೆ ಹುಟ್ಟಿ ಬಂದು ಇಂದಿಗೂ ಜೀವಂತವಾಗಿವೆ. ಟಾರ್ ಬ್ರೌಸರ್ ಬಳಕೆದಾರರಿಗೆ ವಿಶೇಷವಾಗಿ 'ಫೇಸ್‌ಬುಕ್' ತನ್ನ 'ಬ್ಲಾಕ್ ಬುಕ್' ಪ್ರಾರಂಭಿಸಿದೆ. ಇಲ್ಲಿ ಬೇಕಿದ್ದರೆ ನೀವು ಚೆಸ್ ಕ್ಲಬ್ಬಿಗೆ ಸೇರಬಹುದು. ವಿಕಿಲೀಕ್ಸ್ ಅಂತಹ ಸಂಸ್ಥೆ ಡಾರ್ಕ್ ವೆಬ್‌ನೊಂದಿಗೆ ಕೈಜೋಡಿಸಿ ಉಪಯುಕ್ತ ಮಾಹಿತಿ ಪಡೆದು ಪ್ರಪಂಚಕ್ಕೆ ತಿಳಿಸುವ ಕೆಲಸ ಹೊತ್ತಿದೆ.

## ಟಾರ್ ಬ್ರೌಸರ್ ನೈತಿಕವೇ?

ಟಾರ್ ಬ್ರೌಸರ್ ಖಂಡಿತವಾಗಿಯೂ ಕಾನೂನು ಬದ್ಧ! ಕೆಲವು ದೇಶಗಳಲ್ಲಿ ಸರ್ಕಾರವೇ ಇದನ್ನು ಬ್ಲಾಕ್ ಮಾಡಿರುತ್ತದೆ ಮತ್ತು ಇದರ ಬಳಕೆಯನ್ನು ಅನೈತಿಕವೆಂದು ಘೋಷಿಸಿರುತ್ತವೆ. ಚೀನಾ ಇದನ್ನು ನಿಷೇಧಿಸಿದ್ದರೆ, ರಷ್ಯಾ, ಸೌದಿ ಅರೇಬಿಯ ಮತ್ತು ಇರಾನ್ ಇದರ ಬಳಕೆಯಿಂದ ತಮ್ಮ ಪ್ರಜೆಗಳನ್ನು ದೂರವಿಡುವಲ್ಲಿ ಪ್ರಯಾಸ ಪಡುತ್ತಿದ್ದಾರೆ. ದಮನಕಾರಿ ಸರ್ಕಾರಗಳು ಟಾರ್ ಅನ್ನು ನಿಯಂತ್ರಿಸಲು ಪ್ರಯತ್ನಿಸುತ್ತವೆ.

'ಡಾರ್ಕ್ ವೆಬ್' ಸಂಪೂರ್ಣವಾಗಿ ಕೆಟ್ಟದಲ್ಲ. ದರೋಡೆಕೋರರು ತಪ್ಪಿಸಿಕೊಂಡು ಹೋಗಲು ಹೈವೇಗಳನ್ನು ಬಳಸುತ್ತಾರೆ ಎಂದರೆ ಹೈವೇಗಳು ಕೆಟ್ಟದು ಎಂದಲ್ಲ. ಟಾರ್‌ನಲ್ಲಿ ಅಸಂಖ್ಯಾತವಾದ ನೈತಿಕ ಜಾಲಗಳೂ ಇವೆ. ಇಂದಿನ ಪ್ರಜಾಪ್ರಭುತ್ವದ ಆರೋಗ್ಯಕರ ಅಸ್ತಿತ್ವಕ್ಕೆ ಅವುಗಳ ಅಗತ್ಯವಿದೆ.

## ನಿಯಂತ್ರಣದ ಪ್ರಯತ್ನ

ಎಷ್ಟೇ ಸಂಹರಿಸಿದರೂ ಮತ್ತೆ ಮತ್ತೆ ಹುಟ್ಟಿಬರುವ ಈ ಕರಾಳ ಜಾಲದ ಹುಟ್ಟಡಗಿಸುವುದು ಅಸಾಧ್ಯದ ಕೆಲಸ. ವಿಶ್ವದ ಅತ್ಯಂತ ಪ್ರಭಾವಶಾಲಿ ಹಾಗೂ ಬುದ್ಧಿವಂತ ಸಂಸ್ಥೆ ಎಫ್.ಬಿ.ಐ.ಗೆ ಚಳ್ಳೆಹಣ್ಣು ತಿನ್ನಿಸುತ್ತ ಕರಾಳ ಜಾಲವು ರಾಜಾರೋಷವಾಗಿ ಹೇಗೆ ನಡೆಯುತ್ತಿದೆ ಎಂಬುದು ಉತ್ತರಿಸಲಾಗದ ಪ್ರಶ್ನೆ.

ಇತ್ತೀಚೆಗೆ ಎಫ್.ಬಿ.ಐ. ಮತ್ತು ಯೂರೋಪೋಲ್ **Operation Onymous** ಎಂಬ ಹೆಸರಿನಲ್ಲಿ ಜಂಟಿ ಕಾರ್ಯಾಚರಣೆ ನಡೆಸಿ, ಆರು ಅತ್ಯಂತ ಕುಖ್ಯಾತವಾದ ಮಾದಕ ವಸ್ತು ಜಾಲಗಳಲ್ಲಿ ಮೂರನ್ನು ಒಳಗೊಂಡಂತೆ, ಡಜನ್‌ಗಟ್ಟಲೆ ಟಾರ್ ಗುಪ್ತ ಸೇವೆಗಳನ್ನು ಹಿಡಿದು ಹಾಕಿತು. ಈ ಜಾಲಗಳ ಅಡ್ಮಿನ್‌ಗಳನ್ನು ಇನ್‌ಫಾರ್ಮರ್‌ಗಳಾಗಿ ಮಾಡಿಕೊಳ್ಳುವ ಹಳೆಯ ತಂತ್ರದಿಂದ ಇದು ಸಾಧ್ಯವಾಯಿತೇ ಹೊರತು ತಂತ್ರಜ್ಞಾನದ ನೆರವಿನಿಂದ ಆಗಲಿಲ್ಲ. ಹೀಗೆ ಅಲ್ಲಲ್ಲಿ ಆಗಾಗ ಸಣ್ಣ ಪ್ರಮಾಣದಲ್ಲಿ ನಿಯಂತ್ರಣ ಸಾಗುತ್ತಿದೆಯೇ ವಿನಾ ಡಾರ್ಕ್‌ವೆಬ್‌ನ ಒಟ್ಟಾರೆ ನಿರ್ಮೂಲನ ಅಸಾಧ್ಯವೆಂದೇ ಹೇಳಬಹುದು.

ಪ್ರತಿಕ್ರಿಯಿಸಿ: feedback@sudha.co.in